ಚುಟುಕು ಸುದ್ದಿ

ರಾಷ್ಟ್ರೀಯ ಭಾವೈಕ್ಯ ಶಿಬಿರಕ್ಕೆ ಅಪೇಕ್ಷಾ ಆಯ್ಕೆ

ಮೂಡುಬಿದಿರೆ: ಕರ್ನಾಟಕ ಸರಕಾರದ ಶಾಲಾ ಶಿಕ್ಷಣ ಇಲಾಖೆ, ಪದವಿಪೂರ್ವ ವಿಭಾಗದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಬೆಂಗಳೂರಿನ ಗಾಂಧೀ ಭವನದಲ್ಲಿ ಸೆ.17ರಿಂದ 23ರ ವರೆಗೆ ನಡೆಯುವ ರಾಷ್ಟ್ರೀಯ ಭಾವೈಕ್ಯ ಶಿಬಿರಕ್ಕೆ ಮೂಡುಬಿದಿರೆ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿ ಅಪೇಕ್ಷಾ ಶೆಟ್ಟಿ ಆಯ್ಕೆಯಾಗಿದ್ದಾರೆ.

ಈಕೆ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯಾಗಿದ್ದು, ನೃತ್ಯ, ಭಾಷಣ, ಪ್ರಬಂಧ, ಚಿತ್ರಕಲೆ, ಪೋಸ್ಟರ್ ಮೇಕಿಂಗ್, ಕಾರ್ಯಕ್ರಮ ನಿರೂಪಣೆ ಹೀಗೆ ಹಲವು ವಿಧದಲ್ಲಿ ತನ್ನನ್ನು ತೊಡಗಿಸಿಕೊಂಡು ಉತ್ತಮ ಸಾಂಸ್ಕೃತಿಕ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದಾರೆ.

ರಾಷ್ಟ್ರಮಟ್ಟದ ಶಿಬಿರಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯನ್ನು ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಯುವರಾಜ ಜೈನ್, ಕಾರ್ಯದರ್ಶಿ ರಶ್ಮಿತಾ ಜೈನ್, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ವೃಂದ ಅಭಿನಂದಿಸಿದ್ದಾರೆ.

ಪ್ರೆಸ್‌ಕ್ಲಬ್ ಗೌರವ ಅತಿಥಿ ಡಾ.ಗುರುಕಿರಣ್

ಮಂಗಳೂರು: ಮಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಸೆ.20ರಂದು ಬೆಳಗ್ಗೆ 11 ಗಂಟೆಗೆ ನಗರದ ಪತ್ರಿಕಾ ಭವನದಲ್ಲಿ ನಡೆಯುವ ಪ್ರೆಸ್‌ಕ್ಲಬ್ ಗೌರವ ಅತಿಥಿ ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ, ಡಾಕ್ಟರೇಟ್ ಪುರಸ್ಕೃತರಾದ ಗುರುಕಿರಣ್ ಭಾಗವಹಿಸಿ ಸಂವಾದ ನಡೆಸಲಿದ್ದಾರೆ.

ಹಿರಿಯ ಛಾಯಾಗ್ರಾಹಕ ಯಜ್ಞಮಂಗಳೂರು ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಅಧ್ಯಕ್ಷತೆ ವಹಿಸುವರು. ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ ಆರ್. ಉಪಸ್ಥಿತರಿರುವರು ಎಂದು ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

22ರಿಂದ ಭಜನಾ ತರಬೇತಿ

ಉಜಿರೆ: ಧರ್ಮಸ್ಥಳದಲ್ಲಿ 26ನೇ ವರ್ಷದ ಭಜನಾ ತರಬೇತಿ ಕಮ್ಮಟವು ಸೆ.22ರಿಂದ 29ರ ವರೆಗೆ ನಡೆಯಲಿದೆ ಎಂದು ಭಜನಾ ಕಮ್ಮಟದ ಸಂಚಾಲಕ ಸುಬ್ರಹ್ಮಣ್ಯ ಪ್ರಸಾದ್ ಮತ್ತು ಕಾರ್ಯದರ್ಶಿ ಎ.ವಿ.ಶೆಟ್ಟಿ ಹಾಗೂ ಭಜನಾ ಪರಿಷತ್ ಅಧ್ಯಕ್ಷ ಚಂದ್ರಶೇಖರ ಸಾಲಿಯಾನ್ ತಿಳಿಸಿದ್ದಾರೆ.

ಭಜನಾ ತರಬೇತಿಯಲ್ಲಿ ಶೃತಿ, ರಾಗ, ತಾಳ, ನೃತ್ಯಭಜನೆ, ತಜ್ಞರಿಂದ ಉಪನ್ಯಾಸ, ಕಾರ್ಯಕ್ರಮ ಆಯೋಜಿಸಲಾಗಿದೆ.

ಸೆ.29 ರಂದು 300 ಭಜನಾ ತಂಡಗಳ 500 ಭಜನಾ ಪಟುಗಳಿಂದ ಶೋಭಾಯಾತ್ರೆ ಹಾಗೂ ಅಮೃತವರ್ಷಿಣಿ ಸಭಾಭವನದಲ್ಲಿ ಭಜನೋತ್ಸವ ನಡೆಯಲಿದೆ.

ಉದ್ಘಾಟನಾ ಸಮಾರಂಭ: ಸೆ.22ರಂದು ಪೂರ್ವಾಹ್ನ ಹನ್ನೊಂದು ಗಂಟೆಗೆ ಮಹೋತ್ಸವ ಸಭಾಭವನದಲ್ಲಿ ತರಬೇತಿ ಕಮ್ಮಟವನ್ನು ಮೂಡಬಿದ್ರೆ ಜೈನಮಠದ ಪೂಜ್ಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಉದ್ಘಾಟಿಸುವರು.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆ ವಹಿಸುವರು. ಮಾಣಿಲದ ಮೋಹನದಾಸ ಸ್ವಾಮೀಜಿ ಶುಭಾಶಂಸನೆ ಮಾಡುವರು.

ರಫ್ತು ವಹಿವಾಟು ಹೆಚ್ಚಳ

ಮಂಗಳೂರು: ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಭಾರತದ ಇ-ಕಾಮರ್ಸ್ ಕ್ಷೇತ್ರದ ಒಟ್ಟಾರೆ ರಫ್ತಿನಲ್ಲಿ ದೇಶದ ಲಕ್ಷಾಂತರ ಉದ್ಯಮಗಳ ವಹಿವಾಟು 13 ಶತಕೋಟಿ ಡಾಲರ್ ದಾಟುವ ನಿರೀಕ್ಷೆ ಇದೆ.

ಅಮೆಜಾನ್ ಇತ್ತೀಚೆಗೆ ಬಿಡುಗಡೆ ಮಾಡಿದ ದೇಶದ ರಫ್ತು ವಹಿವಾಟಿನ 2024ನೇ ಸಾಲಿನ ಸುವ್ಯವಸ್ಥಿತ ಮಾಹಿತಿಯಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾಗಿದೆ.

ಅಮೆಜಾನ್‌ನ ಪ್ರಮುಖ ಇ-ವಾಣಿಜ್ಯ ರಫ್ತು ಯೋಜನೆಯಾಗಿರುವ 'ಅಮೆಜಾನ್ ಜಾಗತಿಕ ಮಾರಾಟ'ವನ್ನು 2015ರಲ್ಲಿ ಪ್ರಾರಂಭಿಸಲಾಗಿತ್ತು. ಕಳೆದ ಒಂಬತ್ತು ವರ್ಷಗಳಲ್ಲಿ, 1.50 ಲಕ್ಷ ರಫ್ತುದಾರರು ಈ ಕಾರ್ಯಕ್ರಮದ ಭಾಗವಾಗಿದ್ದಾರೆ, ಅವರೆಲ್ಲರ ಒಟ್ಟಾರೆ ಮಾರಾಟವು 'ಭಾರತದಲ್ಲಿಯೇ ತಯಾರಿಸಿದ' 40 ಕೋಟಿ ಉತ್ಪನ್ನಗಳನ್ನು ವಿಶ್ವದಾದ್ಯಂತ ಗ್ರಾಹಕರಿಗೆ ಮಾರಾಟ ಮಾಡಿದ್ದಾರೆ ಎಂದು ಅಮೆಜಾನ್ ಇಂಡಿಯಾದ ಜಾಗತಿಕ ವಹಿವಾಟಿನ ನಿರ್ದೇಶಕ ಭೂಪೇನ್ ವಾಕಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಎಸ್‌ಐ ನಿತ್ಯಾನಂದ ನಿಧನ

ಉಡುಪಿ: ಕಳೆದ 3 ವರ್ಷದಿಂದ ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿಯಲ್ಲಿ ಪೊಲೀಸ್ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಿತ್ಯಾನಂದ (51) ಹೃದಯಾಘಾತದಿಂದ ನಿಧನರಾದರು.

ಸೋಮವಾರ ಕರ್ತವ್ಯ ಮುಗಿಸಿ ಶಿರ್ವದಲ್ಲಿನ ತನ್ನ ಮನೆಗೆ ತೆರಳಿದ್ದ ಅವರು, ರಾತ್ರಿ ಊಟ ಮುಗಿಸಿ ಮಲಗಿದ್ದವರು. ಮಂಗಳವಾರ ಬೆಳಗ್ಗೆ ಎದ್ದಿರಲಿಲ್ಲ. ಮನೆಯವರು ಗಮನಿಸಿದಾಗ ಮೃತರಾದುದು ಬೆಳಕಿಗೆ ಬಂದಿತು. ಮೂಲತಃ ಮಂಗಳೂರಿನ ಕುತ್ಯಾರಿನವರಾದ ನಿತ್ಯಾನಂದ ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಇದ್ದಾರೆ.

ಬಾಳೆಪುಣಿ ಸ್ವಚ್ಛ ವಾರ್ಡ್ ಸಂಕಲ್ಪ

ಮುಡಿಪು: ಬಾಳೆಪುಣಿ ಗ್ರಾಪಂ.ನ 3ನೇ ವಾರ್ಡ್‌ನ್ನು ಮುಂಬರುವ ಡಿ.1ರೊಳಗೆ ಬಯಲು ಕಸಾಲಯ ಮುಕ್ತ ಸಂಪೂರ್ಣ ಮಾದರಿ ವಾರ್ಡ್‌ನ್ನಾಗಿ ಪರಿವರ್ತಿಸಲಾಗುವುದೆಂದು ವಾರ್ಡ್ ಸದಸ್ಯರಾದ ಭಾಸ್ಕರ ಕೋಟ್ಯಾನ್ ಮತ್ತು ಸುನಿಲ್ ಗಟ್ಟಿ ಅವರು ತಿಳಿಸಿದರು.

ಸ್ವಚ್ಛತೆಯೇ ಸೇವೆ ಅರಿವಿನ ಅಭಿಯಾನಕ್ಕೆ ಶ್ರಮದಾನದ ಮೂಲಕ ಚಾಲನೆ ನೀಡಿದ ಅವರು ಸಂಜೀವಿನಿ ಒಕ್ಕೂಟ, ಸ್ತ್ರೀಶಕ್ತಿ ಮತ್ತಿತರ ಸಂಘ ಸಂಸ್ಥೆಗಳ ಸಹಕಾರದಲ್ಲಿ ಮನೆ ಭೇಟಿ ಮತ್ತು ನಿರಂತರ ಶ್ರಮದಾನದ ಮೂಲಕ ಕಾರ್ಯ ಸಾಧಿಸುವ ಸಂಕಲ್ಪ ಮಾಡಲಾಗಿದೆ ಎಂದರು.

ಜಿಲ್ಲಾ ಸ್ವಚ್ಛತಾ ರಾಯ ಭಾರಿ ಶೀನ ಶೆಟ್ಟಿ ಜನಪದ ವಿದ್ವಾಂಸ ಚಂದ್ರಹಾಸ ಕಣಂತೂರು ಮಹಿಳಾ ಮುಖಂಡರಾದ ಸುಮಾ ಹರೀಶ್ ಶೆಟ್ಟಿ, ಯೋಗೀಶ್ ಬೊಳೂರು, ಬೆಳ್ಳೆರಿಯ ಧನ್ ರಾಜ್, ಮನೋಜ್ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳು ಮಂಗಳೂರು ಕಾರ್‌ಸ್ಟ್ರೀಟ್ ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನ ಸಮಾಜ ಕಾರ್ಯ ವಿದ್ಯಾರ್ಥಿಗಳು, ಜನ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿ ಮೊದಲಾದವರು ಜಾಗೃತಿ ಮತ್ತು ಶ್ರಮದಾನದಲ್ಲಿ ಭಾಗವಹಿಸಿದ್ದರು.

ICICI Home Finance

ಕಾರ್ಪೋರೇಟ್ ಕಛೇರಿ: ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ ಕುರ್ಲಾ ರಸ್ತೆ, ಅಂಧೇರಿ ಪೂರ್ವ, ಮುಂಬೈ-400059, ಇಂಡಿಯಾ.
ಶಾಖಾ ಕಚೇರಿ:- 1ನೇ ಮಹಡಿ, ಕಚೇರಿ ನಂ.361/2-361/2-1232, ಜಯಚಂದ್ರ ಬಲ್ಡಿಂಗ್, ಪಿಬಿ ಗೌಡ ಕಾಂಪೌಂಡ್, 4ನೇ ಕ್ರಾಸ್ ಪಾರ್ಕ್ ಎಕ್ಸ್‌ಟೆನ್ಷನ್, ದುರ್ಗಿಗುಡಿ, ಶಿವಮೊಗ್ಗ - 577201.

ಬಾಕಿಗೆ ಒಪ್ಪಂದದ ಮೂಲಕ ಸ್ಥಿರಾಸ್ತಿಗಳ ಮಾರಾಟದ ಸೂಚನೆ

ನಿಯಮ 8(8)ರ ಜೊತೆಗೆ 9(1)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಐಸಿಐಸಿಐ ಹೆಚ್‌ಎಫ್‌ಸಿ) ಈ ಕೆಳಗೆ ನಮೂದಿಸಲಾದ ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಹಲವಾರು ಹರಾಜುಗಳನ್ನು ನಡೆಸಲಾಗಿತ್ತು, ಆದಾಗ್ಯೂ ಅಂತಹ ಎಲ್ಲಾ ಇ-ಹರಾಜುಗಳು ವಿಫಲವಾಗಿವೆ. ಪ್ರಸ್ತುತ ಆಸಕ್ತ ಖರೀದಿದಾರರು ಐಸಿಐಸಿಐ ಎಚ್‌ಎಫ್‌ಸಿಗೆ ಬರಬೇಕಾದ ಬಾಕಿ ಮೊತ್ತ ರೂ.3,000,000. ಈ ಮೊಲಕ ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ (ರು) ಮತ್ತು ಜಾಮೀನುದಾರರಿಗೆ (ಗಳು) ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲಗಾರರಿಗೆ ಅಡಮಾನವಿಡಲಾಗಿದೆ/ಜರ್ಜ್ ಮಾಡಲಾಗಿದ್ದು, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನ ಪಡಿಸಿಕೊಂಡಿದ್ದು, ಹಾಸಗಿ ಒಪ್ಪಂದದ ಮೂಲಕ "ಎಲ್ಲಿ ಏನಿದೆಯೋ ಹಾಗೆಯೇ", "ಎಲ್ಲಿ ಹೇಗಿದೆಯೋ ಹಾಗೆಯೇ" ಮತ್ತು "ಏನು ಉಳಿದಿದೆಯೋ ಅವು ಸೇರಿದಂತೆ" ಆಧಾರದ ಮೇಲೆ ಇಲ್ಲಿ ನೀಡಿರುವ ಸಂಕ್ಷಿಪ್ತ ವಿವರಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ.

ಕ್ರ. ಸಂ	ಸಾಲಗಾರರ / ಸಹ-ಸಾಲಗಾರರ/ ಜಾಮೀನುದಾರರ/ಅಗೂರು ಉತ್ತರಾಧಿಕಾರಿಗಳ ಹೆಸರು ಲೋನ್ ಖಾತೆ ನಂ.	ಎಸ್ಕಂಬರೆಸ್ ಯಾವುದಾದರೂ ತೀಲಿದ್ದರೆ ಸುರಕ್ಷಿತ ಆಸ್ತಿ(ಗಳ) ವಿವರಗಳು	ಬರಬೇಕಾದ ಬಾಕಿಗಳು	ಮೀಸಲು ಬೆಲೆ ಮುಂಗಡ ಠೇವಣಿ ಮೊತ್ತ	ಆಸ್ತಿಯ ಪರಿವೀಕ್ಷಣೆ ದಿನಾಂಕ ಸಮಯ	ಹರಾಜಿನ ದಿನಾಂಕ & ಸಮಯ	ಒಂದು ದಿನ ಮುಂಚೆ ಹರಾಜಿನ ದಿನಾಂಕ	ಸರ್ಫೇಸಿ ಹಂತ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿಎಚ್)	(ಐ)	(ಜೆ)
1	ರಾಧಿಕ (ಸಾಲಗಾರರು) ರಾಜೇಶ್ (ಸಹ-ಸಾಲಗಾರರು) ಗಿರಿಜಾಬಾಯಿ (ಜಾಮೀನುದಾರರು) ಲೋನ್ ಖಾತೆ ನಂ. LHMNG00001320830 & LHMNG00001320831	ಮನೆ ಡೋರ್ ನಂ. 3-112/34, ಆಸ್ತಿ ನಂ. 151100100200100870, ಆದರ್ಶ ನಗರ, ಸರ್ವೆ ನಂ.231, ಕಲಮಂಜ ಗ್ರಾಮ ಪಂಚಾಯತ್, ಬೆಳತಂಗಡಿ ತಾಲ್ಲೂಕು, ಡಿ ಕೆ ಜಿಲ್ಲೆ, ಕರ್ನಾಟಕ.	ರೂ. 4,925,482.78/- 9ನೇ ಸೆಪ್ಟೆಂಬರ್ 2024	ರೂ. 3,000,000/- ರೂ. 300,000/-	ಸೆಪ್ಟೆಂಬರ್ 24, 2024 ಬೆಳಗ್ಗೆ 11.00 ಗಂಟೆ ಯಿಂದ ಮಧ್ಯಾಹ್ನ 03.00 ಗಂಟೆಯವರೆಗೆ	ಅಕ್ಟೋಬರ್ 4, 2024 ಮಧ್ಯಾಹ್ನ 02.00 ಗಂಟೆ ಯಿಂದ ಮಧ್ಯಾಹ್ನ 03.00 ಗಂಟೆಯವರೆಗೆ	03ನೇ ಅಕ್ಟೋಬರ್ 2024	ಭೌತಿಕವಾಗಿ ಸ್ವಾಧೀನ

ನಮ್ಮ ಹರಾಜು ಏಜೆನ್ಸಿ ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ (URL Link-eauctions.samil.in) ನಲ್ಲಿ ಆನ್‌ಲೈನ್ ಹರಾಜನ್ನು ನಡೆಸಲಾಗುವುದು. ಅಡಮಾನದಾರರಿಗೆ/ಸೋಲಿಸಲ್ಪಡುವ ಒಟ್ಟು ಬಾಕಿಯನ್ನು ಹೆಚ್ಚಿನ ಬಡ್ಡಿಯೊಂದಿಗೆ ಪಾವತಿಸಲು ಕೊನೆಯ ಅವಕಾಶವನ್ನು ನೀಡಲಾಗಿದೆ ಇಲ್ಲದಿದ್ದರೆ ಮೇಲಿನ ಷೆಡ್ಯೂಲ್‌ನಲ್ಲಿ ವಿವರಿಸಿದ ಪ್ರಕಾರ ಈ ಸುರಕ್ಷಿತ ಸ್ವತ್ತುಗಳನ್ನು ಮಾರಾಟ ಮಾಡಲಾಗುತ್ತದೆ. ನಿರೀಕ್ಷಿತ ಬಿಡ್ಡರ್‌ಗಳು ಮುಂಗಡ ಠೇವಣಿ ಮೊತ್ತವನ್ನು(ಇಎಂಡಿ) ಆರ್‌ಟಿಜಿಎಸ್ / ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) (ಅಲಹಾಬಾದ್ ಇ ಉಳ್ಳೇಖದಂತೆ) ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಮೇಲಿನ ಶಾಖಾ ಕಚೇರಿಗೆ ದಿನಾಂಕ : ಅಕ್ಟೋಬರ್ 03, 2024 ರಂದು ಅಥವಾ ಮೊದಲು ಸಂಜೆ 04:00 ಗಂಟೆಗೆ ಮೊದಲು ಸಲ್ಲಿಸಬೇಕು. ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಶಾಖಾ ಕಚೇರಿ ರವರಿಗೆ ದಿನಾಂಕ : ಅಕ್ಟೋಬರ್ 03, 2024 ರಂದು ಅಥವಾ ಮೊದಲು ಸಂಜೆ 05:00 ಗಂಟೆಯ ಮೊದಲು ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ನಮೂನೆಯ ಕೆಳಸಹಿದಾರರು ಪ್ರತಿಯನ್ನು ಸಹ ನಿರೀಕ್ಷಿತ ಬಿಡ್ಡರ್‌ರು ಸಲ್ಲಿಸಬೇಕು. ಮುಂಗಡ ಠೇವಣಿ ಮೊತ್ತವನ್ನು ಡಿಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ರಾಷ್ಟ್ರೀಕೃತ/ಷೆಡ್ಯೂಲ್ಡ್ ಬ್ಯಾಂಕ್‌ನಿಂದ "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ - ಹರಾಜು" ಬೆಳತಂಗಡಿ ಪಾವತಿಸಬೇಕು. ತಪ್ಪಾಸಗೆಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ಮೇಲೆ ತಿಳಿಸಿದ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಬಡ್ಡಗಳನ್ನು ಸಲ್ಲಿಸಲು ಸಾರ್ವಜನಿಕರನ್ನು ಸಂಪರ್ಕಿಸಲಾಗಿದೆ. ಮೇಲೆ ತಿಳಿಸಿದಂತೆ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಯಾವುದೇ ಬಡ್ಡಗಳನ್ನು ಐಸಿಐಸಿಐ ಹೆಚ್‌ಎಫ್‌ಸಿ ಸ್ವೀಕರಿಸಿದ್ದರೆ, ಅಡಮಾನ ಇಟ್ಟಿರುವ ಆಸ್ತಿಯನ್ನು ನಿಯಮ 8(8) ಜೊತೆಗೆ ನಿಯಮ 9 (1) ಭದ್ರತಾ ಆಸ್ತಿ (ಜಾರಿ) ನಿಯಮಗಳು, 2002 ರ ಪ್ರಕಾರ ಅಂತಹ ಆಸಕ್ತ ಖರೀದಿದಾರರಿಗೆ ಮಾರಾಟ ಮಾಡಲಾಗುತ್ತದೆ ಎಂದು ಈ ಮೊಲಕ ತಿಳಿಸಲಾಗಿದೆ. ತಪ್ಪಾಸಗೆಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ಹರಾಜಿನ ಅಥವಾ ಟೆಂಡರ್‌ಗಳ ಸಲ್ಲಿಕೆಯ ನಿಯಮಗಳು ಮತ್ತು ಷರತ್ತುಗಳು, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ನ 9920807300 ಸ್ಟ್ರಿ ಸಂಪರ್ಕಿಸಿ.

ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಡ್ಡಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಾಗಿ, ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ

ದಿನಾಂಕ: 18.09.2024, ಸ್ಥಳ: ಬೆಳತಂಗಡಿ ಸಹಿ/- ಅಧಿಕೃತ ಅಧಿಕಾರಿಗಳ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ CIN : U65922MH1999PLC120106

9/11 ಆದೇಶ ಇನ್ನು ಮುಂದೆ ತಾಲೂಕಿನಲ್ಲಿ ಸಿಗಲಿದೆ | ಸಮಸ್ಯೆ ಇಲ್ಲದೆ ಆದೇಶಪತ್ರ ಕೈಗೆ ದೊರಕುವ ವ್ಯವಸ್ಥೆ

ಜನರ ಸಂಕಷ್ಟಕ್ಕೆ ಪರಿಹಾರ: ನಿಯಮಗಳಿಗೆ ರಿಯಾಯತಿ

ಸಂ.ಕ.ಸಮಾಚಾರ, ಪುತ್ತೂರು

ಅಭಿವೃದ್ಧಿಯ ಹಿನ್ನಲೆಯಲ್ಲಿ 9/11 ಆದೇಶ ಪಡೆಯಲು ಜನತೆಗೆ ಎದುರಾಗಿದ್ದ ತೊಡಕನ್ನು ನಿವಾರಿಸುವ ನಿಟ್ಟನಲ್ಲಿ ಎರಡು ಪ್ರಮುಖ ನಿಮಯಗಳಿಗೆ ರಿಯಾಯತಿ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಲಾಗಿದೆ. 25 ಸೆಂಟ್ಸ್ ತನಕದ ಭೂಮಿಯ ಅಭಿವೃದ್ಧಿಗೆ ಇನ್ನು ಮುಂದೆ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ತಾಲೂಕು ಕೇಂದ್ರಗಳಲ್ಲಿ ಆದೇಶ ದೊರೆಯಲಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಮಾಹಿತಿ ನೀಡಿದರು.

ಪುತ್ತೂರು ತಾಲೂಕು ಆಡಳಿತ ಸೌಧದಲ್ಲಿ ಮಂಗಳವಾರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್.ವೆಂಕಟಾಚಲಪತಿ ಅವರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಬಳಿಕ ಮಾಹಿತಿ ನೀಡಿದರು.

9/11 ಆದೇಶ ನೀಡಲು ಈ ಹಿಂದೆ ಇದ್ದ ರಸ್ತೆ ಹಾಗೂ ದಾನಪತ್ರದ ಎರಡೂ ನಿಯಮಗಳಿಗೂ ರಿಯಾಯತಿ ನೀಡಲಾಗಿದೆ. ಅರ್ಜಿ ಸಲ್ಲಿಸಿದ ಭೂಮಿಗೆ ಸಂಪರ್ಕ ರಸ್ತೆ ಇದ್ದರೆ ಸಾಕು. 25 ಸೆಂಟ್ಸ್ ತನಕದ ಅಭಿವೃದ್ಧಿ ಮನೆಕಟ್ಟವವರಿಗೆ ಯಾವುದೇ ಸಮಸ್ಯೆ ಇಲ್ಲದೆ ಆದೇಶಪತ್ರ ಕೈಗೆ ದೊರಕುವ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಈ ಹಿಂದೆ ಗ್ರಾಪಂ ಗಳಲ್ಲಿ ಈ ಆದೇಶ ನೀಡಲಾಗುವ ವ್ಯವಸ್ಥೆ ಇತ್ತು. ಆದರೆ ಇದನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಹೈಕೋರ್ಟಿಗೆ ಮೊರೆ ಹೋದ ಕಾರಣ ಈ ಆದೇಶ ನೀಡುವ ಜವಾಬ್ದಾರಿಯನ್ನು ನಗರಪಾಲಿಕಾ ಪ್ರಾಧಿಕಾರಗಳಿಗೆ ನೀಡಲಾಯಿತು. ಇದರಿಂದ ಗ್ರಾಮೀಣ ಜನತೆ ಅತ್ಯಂತ ಸಂ